

# ಕೊಳಲನೂದುತ ಬಂದ..!

■ ಶಾರದ ಎನ್.ಎಸ್.
ಚಿತ್ರಗಳು: ದಿಲೀಪ್ ಬ್ಯಾನರ್ಜಿ



ಶ್ರಾವಣ ಬಹುಳ (ಶುಕ್ಲ ಪಕ್ಷ) ಅಷ್ಟಮಿಯಂದು ಆಚರಿಸುವ ಹಬ್ಬವೇ ಕೃಷ್ಣ ಜನ್ಮಾಷ್ಟಮಿ. ಇದಕ್ಕೆ ಇರುವ ಇನ್ನೊಂದು ಹೆಸರು ಗೋಕುಲಾಷ್ಟಮಿ. ಶ್ರೀವೈಷ್ಣವರಿಗೆ ಇದು ಬಹಳ ಮುಖ್ಯವಾದ ಹಬ್ಬ. ಅವರು ಕೃಷ್ಣನ ಜನ್ಮ ನಕ್ಷತ್ರವಾದ ರೋಹಿಣಿ ನಕ್ಷತ್ರ ಶ್ರಾವಣ ಮಾಸದಲ್ಲಿ ಬಂದಾಗ ಈ ಹಬ್ಬವನ್ನು ಆಚರಿಸಿದರೆ ಮಿಕ್ಕವರು ಶ್ರಾವಣದ ಅಷ್ಟಮಿಯಂದು ಮಾಡುತ್ತಾರೆ. ಕಾರಣ ಶ್ರೀಕೃಷ್ಣನು ಅಷ್ಟಮಿ ಯಂದು ಜನಿಸಿದ್ದು. ಭಾಗವತದಲ್ಲಿ ಕೃಷ್ಣನ ಕುರಿತು ಸಾಕಷ್ಟು ವಿವರಗಳು ಬರುತ್ತವೆ. 18 ಪುರಾಣಗಳ ಪೈಕಿ ಬ್ರಹ್ಮ ಪುರಾಣ, ಪದ್ಮ ಪುರಾಣ, ವಿಷ್ಣು ಪುರಾಣ, ಶ್ರೀಮದ್ಭಾಗವತ, ಬ್ರಹ್ಮ ವೈವರ್ತ ಪುರಾಣ, ಸ್ಕಂದ ಪುರಾಣ, ವಾಮನ ಪುರಾಣ, ಕೂರ್ಮ ಪುರಾಣ ಮುಂತಾದವುಗಳಲ್ಲಿ ಶ್ರೀಕೃಷ್ಣನ ವೃತ್ತಾಂತ ದಾಖಲಾಗಿದೆ. ಅಷ್ಟಮಿ ಎಂದರೆ ಸಂಖ್ಯೆ 8. ಇದಕ್ಕೆ ಆದಿಯೂ ಇಲ್ಲ ಮತ್ತು ಅಂತ್ಯವೂ ಇಲ್ಲ. ಈ ಸಂಖ್ಯೆ ನಿರಂತರತೆಯನ್ನು ಸೂಚಿಸುತ್ತದೆ.

ವಿಷ್ಣುವಿನ ದಶಾವತಾರಗಳಲ್ಲಿ ಕೃಷ್ಣಾವತಾರವು 8ನೇ ಅವತಾರ. ಅವನು ದುಷ್ಟರನ್ನು ಶಿಕ್ಷಿಸಲು ಮತ್ತು ಶಿಷ್ಟರನ್ನು ರಕ್ಷಿಸಲು ಈ ಅವತಾರವನ್ನು ಎತ್ತಿದ. ಅವನು ದುಷ್ಟರನ್ನು ಸಂಹರಿಸಿದ್ದು ಯಾವ ದ್ವೇಷ–ಅಸೂಯೆಯಿಂದಲೂ ಅಲ್ಲ. ರಾಕ್ಷಸರಿಂದ ಸಾಮಾನ್ಯ ಜನರಿಗೆ ಆಗುತ್ತಿದ್ದ ತೊಂದರೆಗಳ ನಿವಾರಣೆಗಾಗಿ ಅವರನ್ನು ಸಂಹರಿಸಿ 'ದುಷ್ಟ ಶಿಕ್ಷಕ, ಶಿಷ್ಟ ರಕ್ಷಕ'ನಾದನು. ಭಾರತದ ಪುರಾಣದ ವ್ಯಕ್ತಿಗಳಲ್ಲಿ ಶ್ರೀಕೃಷ್ಣ ಅತ್ಯಂತ ಜನಪ್ರಿಯ. ಶ್ರೀಕೃಷ್ಣ ಪಾರ್ಥನಿಗೆ ಉಪದೇಶಿಸಿದ 'ಭಗವತ್‌ಗೀತೆ' ಜೀವನದ ಮೌಲ್ಯ, ಧರ್ಮ, ನೀತಿ, ಯೋಗ, ಭಕ್ತಿ ಮೊದಲಾದವನ್ನು ತಿಳಿಸುತ್ತದೆ. ಶ್ರೀಕೃಷ್ಣನ ಬಗ್ಗೆ 'ಭಾಗವತ, ಮುಕುಂದಮಾಲಾ, ಗೀತ ಗೋವಿಂದ' ಮೊದಲಾದ ಗ್ರಂಥಗಳಲ್ಲಿ ನಮಗೆ ವಿವರಗಳು ಲಭ್ಯವಾಗುತ್ತವೆ.

ಶ್ರೀಕೃಷ್ಣನ ಬಾಲ್ಯಲೀಲೆಯೂ ಬಲು ಮೋಹಕ. ಪ್ರೌಢಾವಸ್ಥೆಗೆ ಬಂದ ಮೇಲಿನ ಅವನ ಲೀಲೆ ಲೋಕ ಕಲ್ಯಾಣಕ್ಕೆ ಮೀಸಲಾಯಿತು. ಅವನು ಅನೇಕ ರಾಕ್ಷಸರನ್ನು ಕೊಂದ. ಕಂಸನನ್ನು ಕೊಂದು ತನ್ನ ತಂದೆ–ತಾಯಿಯಾದ ದೇವಕಿ–ವಸುದೇವರನ್ನು ಸೆರೆಮನೆಯಿಂದ ಮುಕ್ತಗೊಳಿಸಿದ. ಮೇಲು ಕೀಳೆಂಬ ಭೇದ–ಭಾವವಿಲ್ಲದೆ ಎಲ್ಲರಿಗೂ ಸಹಾಯ ಮಾಡಿದ. ಗೋವರ್ಧನಗಿರಿಯನ್ನು ಎತ್ತಿಹಿಡಿದು 'ಗೋವರ್ಧನ'ನಾದನು. ಗೋವುಗಳನ್ನು ರಕ್ಷಿಸಿದ್ದರಿಂದ 'ಗೋಪಾಲ'ನಾದ. ಕೊಳಲನ್ನು ನುಡಿಸಿ ಗೋವುಗಳನ್ನು ಮತ್ತು ಗೋಪಿಯರನ್ನು ಆಕರ್ಷಿಸುತ್ತಿದ್ದುದರಿಂದ 'ಮುರಳಿ ಮೋಹನ'ನಾದ. ಅವನ ಮೈ ಬಣ್ಣ ತುಸು ಕಪ್ಪಾದ್ದರಿಂದ 'ಶ್ಯಾಮ ಸುಂದರ ಅಥವಾ ನೀಲ ಮೇಘ ಶ್ಯಾಮ'ನಾದ. ಅರ್ಜುನನಿಗೆ ಕುರುಕ್ಷೇತ್ರ ಯುದ್ಧದಲ್ಲಿ ಸಾರಥಿಯಾದ್ದರಿಂದ 'ಪಾರ್ಥ ಸಾರಥಿ'ಯಾದ. ರಾಧೆಯ ಪ್ರಿಯಕರನಾದ್ದರಿಂದ 'ರಾಧಾ ಮಾಧವ'ನಾದ. ಹೀಗೆ ಶ್ರೀಕೃಷ್ಣನು ಅನೇಕ ಹೆಸರುಗಳಿಂದ ಜನಪ್ರಿಯನಾಗಿದ್ದಾನೆ.

(8ನೇ ಪುಟ ನೋಡಿ)